
# ಆಚಾರ್ಯ ಮಧ್ವರ ಜೀವನ ಚರಿತ್ರೆ

ಮೈಸೂರು ಶ್ರೀರಾಮಕೃಷ್ಣ ಆಶ್ರಮವು ಪ್ರಕಟಿಸಿರುವ ವೇದಾಂತ ಆಚಾರ್ಯರ ಜೀವನ ಗ್ರಂಥಗಳ ಸಾಲಿನಲ್ಲಿ ಇನ್ನೊಂದು ಮಹತ್ವದ ಗ್ರಂಥ ಸೇರ್ಪಡೆಯಾಗಿದೆ: ‘ಶ್ರೀ **ಮಧ್ವಾಚಾರ್ಯರ ಜೀವನ ಚರಿತ್ರೆ**.’ ಈ ಕೃತಿಯ ಲೇಖಕರು ‘ವಿವೇಕಪ್ರಭ’ ಮಾಸ ಪತ್ರಿಕೆಯ ಹಿಂದಿನ ಸಂಪಾದಕರಾಗಿದ್ದ, ಪ್ರಸ್ತುತ ಆಸ್ಟ್ರೇಲಿಯಾದ ಅಡಿಲೇಡ್‌ನಲ್ಲಿರುವ ವೇದಾಂತ ಕೇಂದ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಸ್ವಾಮಿ ವೀರೇಶಾನಂದಜಿ ಮಹಾರಾಜ್ ಅವರು. ೮೭ ಪುಟಗಳಲ್ಲಿ ಹರಡಿರುವ ಈ ಜೀವನಚರಿತ್ರೆಯಲ್ಲಿ ಶ್ರೀಮಧ್ವಾಚಾರ್ಯರ ಜೀವನ, ತತ್ತ್ವ ಹಾಗೂ ಸಾಧನೆ ಇವುಗಳೊಂದಿಗೆ ನಮ್ಮ ಆಧ್ಯಾತ್ಮಿಕ ಪರಂಪರೆಗೆ ಅವರು ನೀಡಿದ ಕೊಡುಗೆಯ ಮಹತ್ವವನ್ನು ಸಂಕ್ಷಿಪ್ತವಾಗಿಯೂ ಸರಳವಾಗಿಯೂ ನಿರೂಪಿಸಲಾಗಿದೆ. ತತ್ತ್ವವಿಚಾರಗಳಿಗಿಂತ ಹೆಚ್ಚಾಗಿ ಮಧ್ವರ ಜೀವನದ ಕಥೆಗೆ ಇಲ್ಲಿ ಹೆಚ್ಚಿನ ಮಹತ್ವ ನೀಡಿರುವುದು ಕಂಡುಬರುತ್ತದೆ. (ಅನುಬಂಧದಲ್ಲಿ ಡಾ. ಸಿ ಎಚ್. ಶ್ರೀನಿವಾಸ ಮೂರ್ತಿಯವರು ಬರೆದಿರುವ ‘ಶ್ರೀ ಮಧ್ವಾಚಾರ್ಯರ ಬದುಕಿನ ಆದರ್ಶ’ ಹಾಗೂ ‘ಶ್ರೀ ಮಧ್ವಾಚಾರ್ಯರ ಕೃತಿಗಳು’ ಈ ಲೇಖನಗಳನ್ನು ಸೇರಿಸಲಾಗಿದೆ.) ಕನ್ನಡದಲ್ಲಿ ಆಚಾರ್ಯ ಮಧ್ವರ ಸರಳ-ಸುಂದರ ಜೀವನಚರಿತ್ರೆಯನ್ನು ಒಳಗೊಂಡ ಗ್ರಂಥಗಳು ಹಲವಾರು ಈಗಾಗಲೇ ಹೊರಬಂದಿದ್ದರೂ, ಹಲವು ದೃಷ್ಟಿಗಳಿಂದ - ವಿಶೇಷವಾಗಿ ಅಧಿಕೃತತೆ ಹಾಗೂ ಭಾಷಾಶೈಲಿ - ಈ ದೃಷ್ಟಿಗಳಿಂದ ಹೊಸ ಬಗೆಯ ಕಿರುಗ್ರಂಥವಾಗಿ ಇದು ಹೊರಬಂದಿದೆ.




*ಕೃತಿ :* ಶ್ರೀಮಧ್ವಾಚಾರ್ಯರ ಜೀವನ ಚರಿತ್ರೆ
*ಲೇಖಕರು :* ಸ್ವಾಮಿ ವೀರೇಶಾನಂದ
*ಪ್ರಕಾಶಕರು :* ಶ್ರೀರಾಮಕೃಷ್ಣ ಆಶ್ರಮ, ಯಾದವಗಿರಿ, ಮೈಸೂರು - ೫೭೦೦೨೦
*ಪುಟಗಳು :* 104
*ಬೆಲೆ :* 50 ರೂ.

ಮೊದಲಿಗೆ ಆಚಾರ್ಯತ್ರಯರ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸುವ ಮೂಲಕ ಗ್ರಂಥ ಪ್ರವೇಶವಾಗುತ್ತದೆ. ಅನಂತರ ಪ್ರಾದೇಶಿಕ ಹಿನ್ನೆಲೆ, ಆಚಾರ್ಯರ ಜನನ-ಬಾಲ್ಯ, ವಿದ್ಯಾಭ್ಯಾಸ, ಮಧ್ವಾಚಾರ್ಯರ ಪಾಂಡಿತ್ಯ ಹಾಗೂ ದಿಗ್ವಿಜಯ, ಕೃತಿರಚನೆ, ಬದರಿಕಾಶ್ರಮ ಪ್ರಯಾಣ, ಉಡುಪಿಯಲ್ಲಿ ಶ್ರೀಕೃಷ್ಣನ ಮೂರ್ತಿಯ ಪ್ರತಿಷ್ಠಾಪನೆ, ಅನೇಕ ರೋಚಕ ಪ್ರಸಂಗಗಳು, ಅನೇಕ ಶಿಷ್ಯಂದಿರ ನಿರ್ಮಾಣ, ಮಧ್ವಾಚಾರ್ಯರ ತತ್ತ್ವ-ಸಿದ್ಧಾಂತ — ಈ ಕ್ರಮದಲ್ಲಿ ಈ ಜೀವನ ಚರಿತ್ರೆಯನ್ನು ನಿರೂಪಿಸಲಾಗಿದೆ. ಭಾಷೆ ಸುಲಲಿತವಾಗಿದ್ದು, ಸುಲಭವಾಗಿ ಓದಿಸಿಕೊಂಡು ಹೋಗುವಂತಿದೆ. ಒಂದು ಗಮನಾರ್ಹವಾದ ಸಂಗತಿಯೆಂದರೆ, ಇಲ್ಲಿನ ಗಂಭೀರ ಶೈಲಿಯಲ್ಲಿ ಎಲ್ಲೂ ಇತ್ತೀಚಿನ ಕ್ರಮದಂತೆ ಸಡಿಲವಾದ ಭಾಷಾಪ್ರಯೋಗಗಳು ಕಂಡುಬರುವುದಿಲ್ಲ. ಭಾಷಾಶುದ್ಧಿ, ವ್ಯಾಕರಣ ಶುದ್ಧಿ ಹಾಗೂ ಭಾವಗಾಂಭೀರ್ಯಕ್ಕೆ ಚ್ಯುತಿಯುಂಟಾಗದಂತೆ ಅಚ್ಚುಕಟ್ಟಾದ ಲೇಖನಕ್ರಮವನ್ನು ಲೇಖಕರು ರೂಢಿಸಿಕೊಂಡಿದ್ದಾರೆ. ಆಚಾರ್ಯ ಮಧ್ವರಂತಹ ಮಹಾಪುರುಷರ ಜೀವನಚರಿತ್ರೆಯ ನಿರೂಪಣೆಗೆ ತಕ್ಕದಾದ ಶೈಲಿ ಇದೇ ಆಗಿದೆ. ಕೃತಿಯ ಶೈಲಿಯ ಸೊಬಗನ್ನು ಚಿತ್ರಿಸುವ ಒಂದು ಸಣ್ಣ ಉದಾಹರಣೆ ಇಲ್ಲಿದೆ:

‘‘ಆನಂದ ತೀರ್ಥರು ಬದರೀಧಾಮದಲ್ಲಿ ಅತ್ಯಂತ ಕಠಿಣವಾದ ದಿನಚರಿಯನ್ನು ಕೈಗೊಂಡರು. ಬದರಿಯಲ್ಲಿ ಅಲಕಾನಂದ ಎಂದು ಕರೆಯುವ ಗಂಗೆಯ ತಣ್ಣಗಿನ ನೀರಿನಲ್ಲಿ ಅರುಣೋದಯ ಕಾಲದಲ್ಲಿಯೇ ಸ್ನಾನ ಮಾಡುವರು. ಆ ಉಷಃಕಾಲದಲ್ಲಿ ಬೇರೆಯವರಿಗೆ ಮುಟ್ಟಲೂ ಸಾಧ್ಯವಾಗದಷ್ಟು ತಣ್ಣಗಿನ ಜಲದಲ್ಲಿ ಮುಳುಗೆದ್ದು ಸ್ನಾನ ಮಾಡುವರು. ಅನಂತರ ನಿತ್ಯವೂ ಭಗವಂತನ ಪೂಜೆ ಮತ್ತು ಧ್ಯಾನಗಳನ್ನು ಮಾಡುತ್ತಿದ್ದರು. ಬದರೀಧಾಮದಲ್ಲಿರುವ ಅನಂತಮಠ ಎಂಬಲ್ಲಿ ಕಾಷ್ಠಮೌನ ಎಂಬ ವ್ರತಾಚರಣೆಯನ್ನು ಕೂಡ ಆರಂಭಮಾಡಿದರು.’’ *(ಪು. ೪೪)*

‘ಹಲವು ರೋಚಕ ಪ್ರಸಂಗಗಳು’ ಎಂಬ ಭಾಗದಲ್ಲಿ ಹದಿಮೂರು ಸಣ್ಣ ಸಣ್ಣ ಕುತೂಹಲಕರ ಘಟನೆಗಳನ್ನು ನಿರೂಪಿಸಲಾಗಿದೆ. ಇವು ಮಧ್ವಾಚಾರ್ಯರ ಅಪೂರ್ವ ಹಾಗೂ ಬಹುಮುಖೀ ವ್ಯಕ್ತಿತ್ವವನ್ನು ಪ್ರಕಟಪಡಿಸುತ್ತವೆ. ಗ್ರಂಥದ ಕೊನೆಯಲ್ಲಿ ಬರುವ ಅನುಬಂಧದಲ್ಲಿ ನೀಡಿರುವ ಶ್ರೀಮಧ್ವಾಚಾರ್ಯರ ಬದುಕಿನ ಆದರ್ಶ ಹಾಗೂ ಅವರ ಕೃತಿಗಳ ಸಂಕ್ಷಿಪ್ತ ಪರಿಚಯ ಓದುಗರಿಗೆ ಉಪಯುಕ್ತವಾಗಿವೆ. ಆಚಾರ್ಯರ ಜೀವನ, ಸಾಧನೆ, ಕೃತಿಗಳ ಸುಂದರ ಪರಿಚಯವನ್ನು ಮಾಡಿಕೊಡುವ ಈ ಕೃತಿಯ ಸುಲಭ ಬೆಲೆಗೆ ಲಭ್ಯವಿದೆ; ಆಕರ್ಷಕ ಮುದ್ರಣ ರಕ್ಷಾಪುಟಗಳಿಂದ ಕನ್ನಡ ಓದುಗರಿಗೆ ಸಂಗ್ರಹಯೋಗ್ಯವಾದ ಗ್ರಂಥವೆನಿಸಿದೆ.